OS No. 73/2021 PW-1

<u>ದಿನಾಂಕ **16.04.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಕೆ ಎನ್ ವಕೀಲರಿಂದಃ</u>

ನಾನು ಮತ್ತು 1 ನೇ ಪ್ರತಿವಾದಿಯವರು ಒಂದೇ ಗ್ರಾಮದವರು. 1 ನೇ ಪ್ರತಿವಾದಿಯವರು ಸರ್ಕಾರಿ ನೌಕರ ಎಂದರೆ ನಿಜ. 1 ನೇ ಪ್ರತಿವಾದಿಯವರು ದೊಡ್ಡ ಅಧಿಕಾರಿ ಎಂದು ತಿಳಿದುಕೊಂಡಿರುತ್ತೇನೆ. ದಾವಾ ಆಸ್ತಿ ಪ್ರತಿವಾದಿಯವರ ಪಿತ್ರಾರ್ಜಿತ ಆಸ್ತಿ ಎಂದರೆ ನಿಜ. 1 ನೇ ಪ್ರತಿವಾದಿಯವರಿಗೆ ಇಬ್ಬರು ಹೆಣ್ಣು ಮಕ್ಕಳು ಎಂದರೆ ನಿಜ. ನನಗೆ ಮತ್ತು 1 ನೇ ಪ್ರತಿವಾದಿಗೆ ಬೇರೆ ಹಣಕಾಸಿನ ವ್ಯವಹಾರ ಇಲ್ಲ. ನಾನು ಈಗ ಚನ್ನಪಟ್ಟಣದಲ್ಲಿದ್ದೇನೆ. ನಮ್ಮ ಊರಿನಲ್ಲಿ ವ್ಯವಸಾಯ ಮಾಡುವವರು ಬೇರೆಯವರು ದೊಡ್ಡವರು ಇದ್ದಾರೆಂದರೆ ಸಾಕ್ಷಿಯು ರೈತಾಪಿ ಕುಟುಂಬದವರು ಇದ್ದಾರೆಂದು ನುಡಿಯುತ್ತಾರೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ನನ್ನ ಕುಟುಂಬದಲ್ಲಿ ನನ್ನ ತಂದೆ, ತಾಯಿ, ನನ್ನ ತಮ್ಮ ವ್ಯವಸಾಯ ಮಾಡುತ್ತಾರೆ. ನನ್ನ ತಮ್ಮ ಬಿಟಿ ಎಸ್ ನಲ್ಲಿ ನಿರ್ವಾಹಕನಾಗಿರುತ್ತಾರೆ.1 ನೇ ಪ್ರತಿವಾದಿಯವರ ಅಣ್ಣ ತಮ್ಮಂದಿರು ಬಿ ವಿ ಹಳ್ಳಿಯಲ್ಲಿ ವಾಸ ಮಾಡಿಕೊಂಡಿದ್ದಾರೆ. ಅವರು ಆರ್ಥಿಕವಾಗಿ ಚೆನ್ನಾಗಿದ್ದಾರೆಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಅವರ ಅಣ್ಣ ತಮ್ಮಂದಿರ ಜೊತೆ ಒಡನಾಟ ಚೆನ್ನಾಗಿದೆ ಎಂದರೆ ಗೊತ್ತಿಲ್ಲ. ನನಗೆ 1 ನೇ ಪ್ರತಿವಾದಿಯ ಜೊತೆ 2019 ರಿಂದ ಜಮೀನು ವಿಚಾರವಾಗಿ ಪರಿಚಯವಿದೆ. ಅದರ ಹಿಂದೆ ಯಾವುದೇ ವ್ಯವಹಾರ ಇರಲಿಲ್ಲ. ನನ್ನ ತಮ್ಮ ಜಮೀನು ಮಾರಾಟದ ಬಗ್ಗೆ ತಿಳಿಸಿರುತ್ತಾರೆ. ದಾವಾ ಆಸ್ತಿಯ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ಪಹಣಿಯನ್ನು ನೋಡಿರುತ್ತೇನೆ. ವ್ಯವಹಾರವಾದಾಗ 1 ನೇ ಪ್ರತಿವಾದಿ ಮಾತ್ರ ಇದ್ದರು ವ್ಯವಹಾರ ನಮ್ಮ ಮನೆಯಲ್ಲಿ ಆಗಿರುತ್ತದೆ. ಆದರೆ ದಿನಾಂಕ ನೆನಪಿಲ್ಲ. ವ್ಯವಹಾರವಾದಾಗ ಬರವಣಿಗೆ ಆಗಿಲ್ಲ. ವ್ಯವಹಾರವಾದಾಗ ಮುಂಗಡ ಹಣ 10 ಸಾವಿರ ಕೊಟ್ಟಿರುತ್ತೇವೆ. ಮಾತುಕತೆಯಾದಾಗ ನಾನು, 1 ನೇ ಪ್ರತಿವಾದಿ, ನಾಗೇಶ್ ರವರು ಮತ್ತು ನಂದೀಶ್ ರವರು ಹಾಜರಿದ್ದೆವು. ನಾಗೇಶ್ ರವರು ಮತ್ತು ನಂದೀಶ್ ರವರು ನನ್ನ ಸ್ನೇಹಿತರು.

1 ನೇ ಪ್ರತಿವಾದಿಯ ಕಡೆಯಿಂದ ಮಾತುಕತೆಯಾದಾಗ ರಾಜುರವರು ಇದ್ದರು. 2019 ರಲ್ಲಿ ಕ್ರಯದ ಕರಾರು ಆದಾಗ 1 ನೇ ಪ್ರತಿವಾದಿ, ಅವರ ಹೆಂಡತಿ, 2 ನೇ ಮಗಳು ಗ್ರೀಶ್ಮಾ ಮತ್ತು ನಾನು ಹಾಗೂ ಸಾಕ್ಷಿದಾರರು ಇದ್ದೆವು. ಕರಾರಿನ ಅಂಶಗಳನ್ನು ನಾನು ಮತ್ತು 1 ನೇ ಪ್ರತಿವಾದಿಯು ಸೇರಿ ಹೇಳಿ ಬರೆಸಿರುತ್ತೇವೆ. ಕರಾರು ಪತ್ರದಲ್ಲಿ ಮುಂಗಡವಾಗಿ ಪಡೆದ 10 ಸಾವಿರ ಹಣದ ಬಗ್ಗೆ ಕರಾರಿನಲ್ಲಿ ನಮೂದಿಸಿದ್ದೀರಾ ಎಂದು ಕೇಳಿದ್ದಕ್ಕೆ ಸಾಕ್ಷಿಯುಬಿಟ್ಟಾಗಿ ಸೇರಿಸಿದ್ದೇವೆಂದು ನುಡಿಯುತ್ತಾರೆ. ದಾವಾ ಆಸ್ತಿ ಪ್ರತ್ಯೇಕ ಪೋಡಿಯಾಗಿದೆ ಎಂದರೆ ಗೊತ್ತಿಲ್ಲ. ನಾನು ಪಹಣಿಯನ್ನು ನೋಡಿರುತ್ತೇನೆ. ಮುಂಗಡ ಹಣ 9 ಲಕ್ಷ ಕೊಟ್ಟಾಗ ಕ್ರಯ ಮಾಡಿಸಿಕೊಳ್ಳಲು ನನಗೆ ತೊಂದರೆ ಇರಲಿಲ್ಲ ಸಾಕ್ಷಿ ಮುಂದುವರೆದು ಅವರಿಗೆ ತೊಂದರೆ ಇತ್ತು ಎಂದು ನುಡಿಯುತ್ತಾರೆ. ತೊಂದರೆಯ ಬಗ್ಗೆ ಕರಾರು ಪತ್ರದಲ್ಲಿ ತಿಳಿಸಿಲ್ಲ. 9 ಲಕ್ಷ ಹಣವನ್ನು ನಗದಾಗಿ ಕೊಟ್ಟಿರುತ್ತೇವೆ. 2 ಲಕ್ಷದ ಮೇಲೆ ವ್ಯವಹಾರವನ್ನು ನಗದು ಮೂಲಕ ಮಾಡುವ ಹಾಗೆ ಇಲ್ಲ ಎಂದರೆ ಸಾಕ್ಷಿಯುನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಟಯೋಟಾ ಕಂಪನಿಯಲ್ಲಿ 26 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನ್ನ ಸಂಬಳ ನನ್ನ ಖಾತೆಗೆ ನೇರವಾಗಿ ಬರುತ್ತದೆ. ಅದೇ ಎಲ್ಲವೂ ಆನ್ ಲೈನ್ ಮೂಲಕ ವ್ಯವಹಾರ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿಯು ನಾನು ಅಕ್ಕ ಪಕ್ಕದವರಿಂದ ಹಣ ಪಡೆದು ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. 9 ಲಕ್ಷ ಹಣ ಕ್ರೋಡೀಕರಿಸಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ನಿಜ. 1 ನೇ ಪ್ರತಿವಾದಿಯ ಕಾನೂನು ಬದ್ದ ವಾರಸುದಾರರಿಗೆ ಮೌಖಿಕವಾಗಿ ಜಮೀನಿನ ಬಗ್ಗೆ ತಿಳಿಸಿರುತ್ತೇನೆ. 1 ನೇ ಪ್ರತಿವಾದಿಯ ಕಾನೂನು ಬದ್ದ ವಾರಸುದಾರರಿಗೆ ಲಿಖಿತವಾಗಿ ಒಪ್ಪಿಗೆ ಪಡೆದಿಲ್ಲ. ಸಾಕ್ಷಿದಾರರು ನನಗೆ ಆತ್ಮೀಯರು ಎಂದರೆ ಸಾಕ್ಷಿಯು ಪರಿಚಯಸ್ಥರು ಎಂದು ನುಡಿಯುತ್ತಾರೆ. ನಾನು ಊರಿನಲ್ಲಿ ಧನ ಸಹಾಯ ಮಾಡುತ್ತೇನೆಂದರೆ ಸುಳ್ಳು. ನಾನು 1 ನೇ ಪ್ರತಿವಾದಿಗೆ ಸಾಲವಾಗಿ ಹಣವನ್ನು ನೀಡಿರುತ್ತೇನೆಂದರೆ ಸುಳ್ಳು. ಈ ಸಾಲದ ಭದ್ರತೆಗಾಗಿ ನಿಪಿ-1 ಅನ್ನು 1 ನೇ ಪ್ರತಿವಾದಿಯು ಮಾಡಿಕೊಟ್ಟಿರುತ್ತಾರೆಂದರೆ ಸುಳ್ಳು. ಕಾಲಮಿತಿಯ ಒಳಗೆ ನಾನು ನೋಟೀಸ್ ಕೊಟ್ಟಿರುತ್ತೇನೆ. ಮೌಖಿಕವಾಗಿ ಒಪ್ಪಿಗೆ ಕೊಟ್ಟ ಬಗ್ಗೆ 1 ನೇ ಪ್ರತಿವಾದಿಯ ಕಾನೂನು ಬದ್ದ ವಾರಸುದಾರರಿಗೆ ನೋಟೀಸ್ ಕೊಟ್ಟಿಲ್ಲ. ಅಸಲು 9

ಲಕ್ಷಕ್ಕೆ ಕೊಟ್ಟ ಬಡ್ಡಿಗೆ ನಾನು ನಿಪಿ-8 ಮುಂದುವರಿಕೆ ಕರಾರು ಪತ್ರವನ್ನು ಬರೆಯಿಸಿಕೊಂಡಿರುತ್ತೇನೇಂದರೆ ಸುಳ್ಳು. ನಿಪಿ-8 ರಲ್ಲಿ ಇರುವಂತೆ 4 ಲಕ್ಷ ಹಣವನ್ನು ನಗದಾಗಿ ಕೊಟ್ಟಿರುತ್ತೇನೆ. 1 ನೇ ಪ್ರತಿವಾದಿಯು ಈ ಹಣವನ್ನು ಕೇಳಿದ ದಿನಾಂಕ ನೆನಪಿಲ್ಲ. 4 ಲಕ್ಷ ಹಣವನ್ನು ಕೊಟ್ಟಾಗಿ 1 ನೇ ಪ್ರತಿವಾದಿ, ಆತನ ಹೆಂಡತಿ ಮತ್ತು ಅವರಮಗಳ ಗ್ರೀಶ್ಮಾ ಇದ್ದರು ನಮ್ಮ ಕಡೆಯಿಂದ ನಾನು, ಸಾಗರ್, ನಂದೀಶ್ ರವರು ಇದ್ದೆವು. 1 ನೇ ಪ್ರತಿವಾದಿಯ ಕಡೆಯಿಂದ ಅವರವರು ಬಿಟ್ಟು ಬೇರೆ ಯಾರು ಇರಲಿಲ್ಲ. ಕೋರೋನಾ ಸಮಯದಲ್ಲಿ ಹಣದ ಚಲಾವಣೆಯನ್ನು ತಡೆಗಟ್ಟಿದ್ದರು ಎಂದರೆ ನಿಜ. ಕೋರೋನಾ ಸಮಯದಲ್ಲಿ ಹಣದ ಅಭಾವವಿತ್ತು ಎಂದರೆ ಸುಳ್ಳು.

ಸಮಯಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.